ದಿನಾಂಕಃ 06-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ- 2 ನೇ ಎದುರುದಾರ ಪರ ಶ್ರೀ ವಿ ಎಸ ಎ ವಕೀಲರಿಂದ

ನಾನು ಬೇರೆಯವರ ಜೆಸಿಬಿ ಚಾಲನೆ ಮಾಡುತ್ತಿದ್ದೆನೆ. ಈಗ ನನಗೆ ಜೆಸಿಬಿ ಚಾಲನೆ ಮಾಡಲು ಆಗುತ್ತಿಲ್ಲ. ನನ್ನ ಹತ್ತಿರ ಜೆಸಿಬಿ ಚಾಲನೆ ಮಾಡಲು ಪರವಾನಿಗೆ ಇಲ್ಲ. ಜೆಸಿಬಿ ಚಾಲನೆ ಮಾಡಲು ಸರಕಾರದಿಂದ ಪರವಾನಿಗೆ ಕೊಡುತ್ತಾರೆ ಎಂದರೆ ಸರಿ. ನಾನು ಜೆಸಿಬಿ ಚಾಲಕನಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಗುತ್ತಿಗೆ ಕೆಲಸ ಮಾಡುತ್ತಿದ್ದೆ ಎಂದು ಹೇಳಿದ್ದು ಆ ಬಗ್ಗೆ ಪರವಾನಿಗೆ ಇಲ್ಲ. ನಾನು ಗುತ್ತಿಗೆ ಕೆಲಸ ಮಾಡದಿರುವ ಕಾರಣ ನನ್ನ ಬಳಿ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾಲ್ಕು ಆಕಳು ಇದ್ದಿದ್ದರಿಂದ ನಾನು ಹಾಲಿನ ವ್ಯಾಪಾರ ಮಾಡುತ್ತಿದ್ದೆ. ನಾನು ಡೇರಿ ಹಾಕಿ ಉಳಿದ ಹಾಲನ್ನು ಸವಣೂರಿನಲ್ಲಿ ಮನೆ ಮನೆಗೆ ಕೊಡುತ್ತಿದ್ದೆ. ಡೇರಿಗೆ ಹಾಲು ಹಾಕಿದರೆ ಅದನ್ನು ಒಂದು ಚಿಕ್ಕ ಪುಸ್ತಕದಲ್ಲಿ ಬರೆದು ಕೊಡುತ್ತಾರೆ ಎಂದರೆ ಸರಿ. ಸದರಿ ಪುಸ್ತಕದಲ್ಲಿ ಹಣ ಸಂದಾಯ ಮಾಡಿದ ಬಗ್ಗೆ ಬರೆಯುತ್ತಾರೆ ಎಂದರೆ ಸರಿ. ಸದರಿ ಪುಸ್ತಕವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಲಿನ ವ್ಯಾಪಾರ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಯಾವುದೇ ದಾಖಲೆ ಹಾಜರುಪಡಿಸದೇ ನನ್ನ ಪ್ರತಿ ತಿಂಗಳ ಆದಾಯ ರೂ. 10,000/- ಇತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಅಪಘಾತ ಆದಾಗ ನನ್ನ ವಯಸ್ಸು 36-37 ವರ್ಷ ಇತ್ತು ಎಂದರೆ 35 ವರ್ಷ ಇತ್ತು. ಆ ದಿನ ನಾನು ಕಾರಿನಲ್ಲಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿ. ಸದರಿ ಕಾರು

ಜಗನ್ನಾಥ ಕುಲಕರ್ಣಿರವರದು. ಅದನ್ನು ಅವರೇ ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಮೃತ 1 ನೇ ಎದುರುದಾರರು ಕಾರನ್ನು ನಿಧಾನವಾಗಿ ರಸ್ತೆಯ ಎಡಬದಿಯಲ್ಲಿ ರಸ್ತೆಯ ನಿಯಮ ಪಾಲನೆ ಮಾಡಿಕೊಂಡು ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಆ ರೀತಿ ಹೋಗುತ್ತಿರುವಾಗ ಎದುರುಗಡೆಯಿಂದ ಬಸ್ಸು ವೇಗವಾಗಿ ಬಂದು ನಮ್ಮ ಕಾರಿಗೆ ಅಪಘಾತಪಡಿಸಿತ್ತು ಎಂದರೆ ಸರಿ. ಸದರಿ ಅಪಘಾತದಲ್ಲಿ ಗಾಯಗೊಂಡು ಜಗನ್ನಾಥ ಕುಲಕರ್ಣಿ ಮೃತಪಟ್ಟಿದ್ದಾರೆ ಎಂದರೆ ಸರಿ. ಅಪಘಾತ ಆಗುವುದಕ್ಕೆ ಜಗನ್ನಾಥ ಕುಲಕರ್ಣಿರವರ ತಪ್ಪು ಇರಲಿಲ್ಲ ಹಾಗೂ ಬಸ್ಸು ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಬಸ್ಸು ಚಾಲಕ ವೇಗವಾಗಿ ಬಸ್ಸು ಚಾಲನೆ ಮಾಡಿಕೊಂಡು ಬಂದು ನಮ್ಮ ಕಾರಿಗೆ ಅಪಘಾತಪಡಿಸಿದ್ದರಿಂದ ನನಗೆ ಮತ್ತು ಜಗನ್ನಾಥ ಕುಲಕರ್ಣಿ ರವರಿಗೆ ಗಾಯಗಳಾಗಿದ್ದವು ಎಂದರೆ ಸರಿ.

<u>ಪಾಟಿ ಸವಾಲುಃ-</u> 3 ನೇ ಎದುರುದಾರ ಪರ ಶ್ರೀ ಎ ಎನ ಐ ವಕೀಲರಿಂದ

3 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು. ಆದ್ದರಿಂದ ಅವರ ಪರ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)